7. ಸರ್ಕಾರವು ಸಮಾಜದ ದುರ್ಬಲ ವರ್ಗದವರ ಏಳಿಗೆಗಾಗಿ ಹಲವಾರು ಸಮಾಜಿಕ, ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಕಾರ ಸಂಘಗಳು ಪ್ರಮುಖವಾದ ಮಾಧ್ಯಮವಾಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ಇಲಾಖಾ ಲೆಕ್ಕ ಪರಿಶೋಧನೆ ಮುಖ್ಯ ಸಾಧನವಾಗಿರುತ್ತದೆ.

ಉ. ಇಲ್ಲ

ಊ. ಸಹಕಾರ ಸಂಸ್ಥೆಗಳ ಲೆಕ್ಕಗಳ ಕಂಪ್ಯೂಟರೀಕರಣ ಕಾರ್ಯ ತೆಗೆದುಕೊಳ್ಳಲಾಗುವುದು, ಇದು ಬಹುತೇಕ ಸಂಘಗಳಲ್ಲಿ ಸಾಕಷ್ಟು ಸಮಯ ಹಿಡಿಯುವುದು ಮತ್ತು ಇದು ಸಹಕಾರಿ ಮೂಲತತ್ವಗಳಿಗೆ ಪಾರದರ್ಶಕ ಮತ್ತು ಹೊಣೆಗಾರಿಕೆಯಾಗಿದೆ.

ಕೃಷ್ಣ - ಘಟಪ್ರಭಾ ನದಿ ಜೋಡಣೆ

1885(2279): ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗಂಗಾ-ಕಾವೇರಿ ನದಿ ಜೋಡನೆಯ ಬೇಡಿಕೆಯಂತೆ ಕೃಷ್ಣಾ-ಘಟಪ್ರಭಾ-ಮಲಪ್ರಭಾ ನದಿ ಜೋಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:

ಆ. ಈ ಯೋಜನೆಯ ಸಾಧಕ ಬಾಧಕಗಳೇನು; ಇದರ ರೂವಾರಿ ಯಾರು, ಇದಕ್ಕಾಗಿ ತಜ್ಞರ ಸಮಿತಿ ನೇಮಿಸಲಾಗಿದೆಯೇ;

ಇ. ಈ ಸಮಿತಿಯು ಪ್ರಸ್ತಾವಿತ ಯೋಜನೆಯನುಸಾರ ಅಧ್ಯಯನ ನಡೆಸಿ ವರದಿ ನೀಡಿದೆಯೇ;

ಈ. ನೀಡಿದ್ದಲ್ಲಿ, ಅದರ ಮುಖ್ಯಾಂಶಗಳೇನು; ಇದರ ಯೋಜನಾ ವೆಚ್ಚ ಎಷ್ಟು;

ಉ. ಈ ನದಿಗಳ ಜೋಡಣೆಯಿಂದ ನೀರಾವರಿ ಸೌಲಭ್ಯ ಸಿಗುವ ಪ್ರದೇಶ ಎಷ್ಟು; ವಿವರ ಒದಗಿಸುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ. ಸದರೀ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಆ. ಮೇಲಿನ ಉತ್ತರದಂತೆ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ. ಮೇಲಿನ ಉತ್ತರದಂತೆ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ. ಮೇಲಿನ ಉತ್ತರದಂತೆ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ. ಮೇಲಿನ ಉತ್ತರದಂತೆ ಪ್ರಶ್ನೆಯು ಉದ್ಭವಿಸುವುದಿಲ್ಲ.

ಬೆಳೆ ವಿಮೆ ಪರಿಹಾರ ವಿತರಣೆ

1886(2280): ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೈತರಿಗೆ ಸೂಕ್ತ ಮಾಹಿತಿ ನೀಡುವಲ್ಲಿ ಅಧಿಕಾರಿಗಳು ತೋರಿದ ನಿರ್ಲಕ್ಷ್ಯತೆಯಿಂದ ರೈತರು ಬೆಳೆ ವಿಮೆ ಪರಿಹಾರ ಪಡೆಯುವಲ್ಲಿ ವಂಚಿತರಾಗಿರುವುದು ನಿಜವೇ;

ಆ. ಪ್ರಕೃತಿ ವಿಕೋಪದಿಂದ ಪಾರಾಗಲು ಬೆಳೆ ವಿಮೆ ಮಾಡಿಸಿರುವ ರೈತರ ಸಂಖ್ಯೆ ಎಷ್ಟು; ವಿವರ ನೀಡುವುದು;

ಇ. ಬೆಳೆ ವಿಮೆ ಪರಿಹಾರವನ್ನು ರೈತರಿಗೆ ವಿತರಿಸಲಾಗಿದೆಯೇ; ವಿತರಿಸಲಾಗಿರುವ ಒಟ್ಟು ಮೊತ್ತ ಎಷ್ಟು (ವಿವರ ಒದಗಿಸುವುದು).